Home Guards

ತುಮಕೂರು ಜಿಲ್ಲಾ ಗೃಹರಕ್ಷಕದಳ

# "ಪತ್ರಿಕಾ ಪ್ರಕಟಣೆಯ ಕೃಪೆಗಾಗಿ"

**ಸ್ವಯಂ ಸೇವಾ ಗೃಹರಕ್ಷಕರ ಖಾಲಿ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ನೇಮಕ ಮಾಡುವ ಕುರಿತು.**

**

ಮಾನ್ಯ ಜಿಲ್ಲಾ ಪೋಲೀಸ್ ಅಧೀಕ್ಷಕರು ಹಾಗೂ ಗೃಹರಕ್ಷಕದಳದ ಆಯ್ಕೆ ಸಮಿತಿ ಅಧ್ಯಕ್ಷರು, ತುಮಕೂರು ಇವರ ಅನುಮೋದನೆ ದಿನಾಂಕ: 16-06-2026ರ ಮೇರೆಗೆ ತುಮಕೂರು ಜಿಲ್ಲೆಯ ವಿವಿಧ ಘಟಕಗಳಲ್ಲಿ ಖಾಲಿ ಇರುವ 234 ಸ್ವಯಂ ಸೇವಾ ಗೃಹರಕ್ಷಕ/ಗೃಹರಕ್ಷಕಿಯರ ಹುದ್ದೆಗಳನ್ನು ಆಯ್ಕೆ ಮಾಡುವ ಸಲುವಾಗಿ ಈ ಕೆಳಕಂಡ ಘಟವಾರು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಘಟಕದ ಹೆಸರು | ಪುರುಷ ಗೃಹರಕ್ಷಕರ ಸಂಖ್ಯೆ | ಮಹಿಳಾ ಗೃಹರಕ್ಷಕಿಯರ ಸಂಖ್ಯೆ | ಒಟ್ಟು ಗೃಹರಕ್ಷಕರ ಸಂಖ್ಯೆ |
|---|---|---|---|---|
| 1 | ತುಮಕೂರು | 20 | 07 | 27 |
| 2 | ಕ್ಯಾತಸಂದ್ರ | 08 | 02 | 10 |
| 3 | ಊರ್ಡಿಗೆರೆ | 11 | 03 | 14 |
| 4 | ಕುಣಿಗಲ್ | 12 | 05 | 17 |
| 5 | ತುರುವೇಕೆರೆ | 05 | 08 | 13 |
| 6 | ಅಮೃತೂರು | 06 | 04 | 10 |
| 7 | ಮಧುಗಿರಿ | 05 | 02 | 07 |
| 8 | ಕೊರಟಗೆರೆ | 09 | – | 09 |
| 9 | ಮಿಡಿಗೇಶಿ | 12 | – | 12 |
| 10 | ಪಾವಗಡ | 14 | 04 | 18 |
| 11 | ವೈ. ಎನ್ ಹೊಸಕೋಟೆ | 04 | – | 04 |
| 12 | ಶಿರಾ | 09 | 03 | 12 |
| 13 | ಗುಬ್ಬಿ | 08 | 04 | 12 |
| 14 | ಕಳ್ಳಂಬೆಳ್ಳ | 07 | – | 07 |
| 15 | ತಾವರೆಕೆರೆ | 15 | – | 15 |
| 16 | ತಿಪಟೂರು | 05 | 07 | 12 |
| 17 | ಚಿಕ್ಕನಾಯಕನಹಳ್ಳಿ | 10 | – | 10 |
| 18 | ನೊಣ್ಣವಿನಕೆರೆ | 09 | 05 | 14 |
| 19 | ಹೊನ್ನವಳ್ಳಿ | 11 | – | 11 |
| | ಒಟ್ಟು | 180 | 54 | 234 |

ಗೃಹರಕ್ಷಕದಳಕ್ಕೆ ಸೇರ ಬಯಸುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ದಿನಾಂಕ: 18-06-2026 ರಿಂದ 25-06-2026ರ ವರೆಗೆ ಅರ್ಜಿ ಸಮಯ ಬೆಳಿಗ್ಗೆ 10:30 ರಿಂದ 01:30 ಮತ್ತು ಮಧ್ಯಾಹ್ನ 03:00 ರಿಂದ 05:00 ಗಂಟೆವರೆಗೆ ವಿತರಿಸಲಾಗುವುದು.. (ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ) ಅರ್ಜಿಗಳನ್ನು ವಿತರಿಸುವ ಸ್ಥಳ ಜಿಲ್ಲಾ ಗೃಹರಕ್ಷಕದಳದ ಕಛೇರಿ, ಬಟವಾಡಿ ತುಮಕೂರು. (ಅಗ್ನಿಶಾಮಕ ಠಾಣೆ ಹತ್ತಿರ) ಅರ್ಜಿಗಳನ್ನು ಉಚಿತವಾಗಿ ಪಡೆಯುವುದು.

ಮುತಿನೋ. . .

ಪಡೆದ ಅರ್ಜಿಗಳನ್ನು ಈ ಕೆಳಗೆ ತಿಳಿಸಲಾಗಿರುವ ತಮ್ಮ ಎಲ್ಲಾ ವಿವರಗಳನ್ನು ಹಾಗೂ ದಾಖಲಾತಿಗಳೊಂದಿಗೆ ಭರ್ತಿಮಾಡಿ ದಿನಾಂಕ: 30-06-2026 ಸಂಜೆ 5-30ರ ಒಳಗೆ ಜಿಲ್ಲಾ ಗೃಹರಕ್ಷಕದಳ ಕಛೇರಿಗೆ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ. ದಿನಾಂಕ: 30-06-2026ರ ನಂತರ ಬರುವ ಯಾವುದೇ ಅರ್ಜಿಗಳನ್ನು ಸ್ವೀಕಾರ ಮಾಡಲಾಗುವುದಿಲ್ಲ.

ಗೃಹರಕ್ಷಕದಳದ ಸಂಸ್ಥೆಯು ಸ್ವಯಂ ಸೇವಕ ಸಂಸ್ಥೆಯಾಗಿದ್ದು, ಇದು ಖಾಯಂ ನೌಕರಿಯಾಗಿರುವುದಿಲ್ಲ. ಯಾವುದೇ ರೀತಿಯ ಮಾಸಿಕ ಸಂಬಳ / ವಿಶೇಷ ಭತ್ಯೆಗಳನ್ನು ಈ ಸಂಸ್ಥೆಯು ನೀಡುವುದಿಲ್ಲ. ನಿಯಮಾನುಸಾರ ತುರ್ತು ಸಂದರ್ಭದಲ್ಲಿ ಕರ್ತವ್ಯ , ಕಾನೂನು ಸುವ್ಯವಸ್ಥೆ, ಟ್ರಾಫಿಕ್ ಕರ್ತವ್ಯ, ಹಾಗೂ ಚುನಾವಣೆ ಕರ್ತವ್ಯಗಳಿಗೆ ನಿಯೋಜಿಸಿದ ದಿನಗಳಂದು ಮಾತ್ರ ಗೌರವ ಧನವನ್ನು ಬ್ಯಾಂಕ್ ಉಳಿತಾಯ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು. ಪ್ರತೀ ಮಾಹೆಯಲ್ಲಿ 4 ಕವಾಯತುಗಳನ್ನು, ವಾರದಲ್ಲಿ ಒಂದರಂತೆ ನಡೆಸಲಾಗುವುದು ಎಂದು ಗೃಹರಕ್ಷಕದಳದ ಜಿಲ್ಲಾ ಸಮಾದೇಷ್ಟರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದೃಢೀಕೃತ ದಾಖಲೆಗಳು.

1. ವಿದ್ಯಾರ್ಹತೆ 10ನೇ ತರಗತಿ ಉತ್ತೀರ್ಣ ಅಥವಾ ಮೇಲ್ಪಟ್ಟು (ಅಂಕಪಟ್ಟಿ)
2. ಜನ್ಮ ದಿನಾಂಕ ದೃಢೀಕರಣ ( ಎಸ್. ಎಸ್. ಎಲ್. ಟಿ.ಸಿ.)
3. ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್
4. ವೋಟರ್ ಐ.ಡಿ.
5. ರೇಷನ್ ಕಾರ್ಡ್
6. ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ 2
7. ಪೋಸ್ಟ್ ಕಾರ್ಡ್ ನಲ್ಲಿ ಪೊಸ್ಟಲ್ ಪಿನ್ ಕೋಡ್‌ನೊಂದಿಗೆ ಸ್ಪಷ್ಟ ವಿಳಾಸವನ್ನು ನಮೂದಿಸಿ ಸಲ್ಲಿಸುವುದು.
8. ದೈಹಿಕ ಸದೃಢತಾ ಪ್ರಮಾಣ ಪತ್ರ
9. ವಯೋಮಿತಿ: 19 ವರ್ಷ ಮುಗಿದಿರಬೇಕು ನಂತರ 50 ವರ್ಷದ ಒಳಗಿರಬೇಕು.
10. ಎಸ್ ಬಿ ಐ ಬ್ಯಾಂಕ್ ಉಳಿತಾಯ ಖಾತೆಯ ನಕಲು ಪ್ರತಿ.

ಹೆಚ್ಚಿನ ಮಾಹಿತಿಗಾಗಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ಜಿಲ್ಲಾ ಗೃಹರಕ್ಷಕದಳ ಕಛೇರಿ, ತುಮಕೂರು ದೂರವಾಣಿ ಸಂಖ್ಯೆ: 0816-2009116

ಸಹಿ/-

ಶ್ರೀ ಸಿ. ಗೋಪಾಲ್ ಕೆಎಸ್‌ಪಿಎಸ್
ಹೆಚ್ಚುವರಿ ಪೊಲೀಸ್ ಅಧೀಕ್ಷಕರು,
ಜಿಲ್ಲಾ ಗೃಹರಕ್ಷಕದಳ ಪ್ರಭಾರ ಸಮಾದೇಷ್ಟರು ಹಾಗೂ
ಸದಸ್ಯ ಕಾರ್ಯದರ್ಶಿ, ಗೃಹರಕ್ಷಕದಳದ ಆಯ್ಕೆ ಸಮಿತಿ, ತುಮಕೂರು.